ಈ) ಮೇಲಿನ ಉತ್ತರದಂತೆ ಪ್ರಶ್ನೆ ಉದ್ಭವಿಸುವುದಿಲ್ಲ.

1601 (2100) ಶ್ರೀ ಮೋಹನ್‌ಕೃಷ್ಣ ಶೆಟ್ಟಿ (ಕುಮಟ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಜಿಲ್ಲಾ ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗೆ ನೀಡುವ ಅನುದಾನಕ್ಕೆ ಹೋಲಿಸಿದರೆ ತಾಲ್ಲೂಕು ಪಂಚಾಯತಿಗೆ ನೀಡುವ ಅನುದಾನವು ಸರಿಯಾದ ಅನುಪಾತದಲ್ಲಿರದೇ ಅತಿ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ತಾಲ್ಲೂಕು ಪಂಚಾಯತಿಗೆ ಈಗಿನ ರೂ. 4.00 ಲಕ್ಷ ಗಳಿಂದ ರೂ. 25.00 ಲಕ್ಷಗಳಿಗೆ ಅನುದಾನ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದೇ;

ಇ) ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭೀವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು:

ಅ) ಅನುದಾನವು ತಾಲ್ಲೂಕು ಪಂಚಾಯತಿಗಳಿಗೆ ಪಹಿಸಿರುವ ಕರ್ತವ್ಯಗಳಿಗೆ ಅನುಗುಣವಾಗಿದೆ.

ಆ) ಚಟುವಟಿಕೆ ನಕ್ಷೆ ಪ್ರಕಾರ ಕೆಲವು ಯೋಜನೆಗಳು ಪುನರ್ ವಿಂಗಡಣೆಗೊಂಡು ತಾಲ್ಲೂಕು ಪಂಚಾಯತಿಗೆ ಕೆಲವು ಪ್ರಾಕಾರ್ಯಗಳನ್ನು ಹಂಚಲಾಗಿರುತ್ತದೆ. ಇದರಂತೆ ತಾಲ್ಲೂಕು ಪಂಚಾಯತಿಗೆ ರಾಜ್ಯ ವಲಯದಿಂದ ಜಿಲ್ಲಾ ವಲಯಕ್ಕೆ ಕೆಲವು ಕಾಮಗಾರಿಗಳನ್ನು ವಿಲೀನಗೊಳಿಸಲಾಗಿದೆ. ಅದರಂತೆ ಸಾಕಷ್ಟು ಅನುದಾನ ತಾಲ್ಲೂಕು ಪಂಚಾಯತಿಗೆ ಲಭ್ಯವಾಗುತ್ತದೆ.

ಇ) ಮೇಲಿನ ಪ್ರಶ್ನೆಯ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

1602 (2101) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ

ದಯವಿಟ್ಟು ಉತ್ತರಿಸುವರೆ?

1) ಗ್ರಾಮೀಣ ಭಾಗದಲ್ಲಿ ಅನೇಕ ಸಣ್ಣ ಹಳ್ಳಿಗಳಿಗೆ ಫುಟ್‌ಬ್ರಿಡ್ಜ್ ಒದಗಿಸಲು ಹಾಗೂ ರಸ್ತೆಗಳ ನಿರ್ಮಾಣ ನಿರ್ವಹಣೆಗೆ ಪ್ರತ್ಯೇಕ ಅನುದಾನ ಒದಗಿಸಿ ಗ್ರಾಮೀಣ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕ್ರಮಕ್ಕೆಗೊಳ್ಳುವುದೇ;

2) ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಸಿ. ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

1) ಕೇಂದ್ರ ಪುರಸ್ಕೃತ ಯೋಜನೆಯಾದ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಡಿ 2006–07 ನೇ ಸಾಲಿನಲ್ಲಿ ಕೊಡಗು, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಫುಟ್‌ಬ್ರಿಡ್ಜ್ ಹಾಗೂ ರಸ್ತೆ ಸುಧಾರಣೆಗಾಗಿ 258.00 ಲಕ್ಷ ರೂಗಳಿಗೆ ವಿಶೇಷ ಯೋಜನೆಗಳನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಸದರಿ ಕಾಮಗಾರಿಗಳಿಗೆ, 2005–06 ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅನುದಾನದಲ್ಲಿ ಉಳಿಕೆ ಇರುವ ಹಣ ರಾಜ್ಯದಲ್ಲಿ ಉಳಿದಿದ್ದು, ಈ ಅನುದಾನದಲ್ಲಿ ವೆಚ್ಚವನ್ನು ಭರಿಸಲಾಗುವುದು.

2) ಕೇಂದ್ರ ಸರ್ಕಾರದಿಂದ ವಿಶೇಷ ಯೋಜನೆಗಳಿಗೆ ಅನುಮೋದನೆ ಪಡೆದ ಕೂಡಲೇ ಕಾಮಗಾರಿಗಳನ್ನು ಅನುಷ್ಠಾನ ಮಾಡಲಾಗುವುದು.

1603 (2102) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಗ್ರಾಮೀಣ ಭಾಗದಲ್ಲಿರುವ ಯಾವುದೇ ರಸ್ತೆಗಳ ತುರ್ತು ದುರಸ್ತಿ ಕಾರ್ಯಕ್ಕಾಗಿ ವಾರ್ಷಿಕ ನಿರ್ವಹಣೆ ನಿಧಿ ರದ್ದುಪಡಿಸಿರುವುದರಿಂದ ಸದರಿ ರಸ್ತೆಗಳ ತುರ್ತು ದುರಸ್ತಿ ಕಾಮಗಾರಿಗಳಿಗೆ ತೊಡಕಾಗಿರುವುದನ್ನು ಸರ್ಕಾರ ಮನಗಂಡಿದೆಯೇ;

2) ಮನಗಂಡಿದ್ದಲ್ಲಿ ಈ ಕಾಮಗಾರಿಗಳಿಗೆ ಅನುದಾನ ನೀಡಲಾಗುವುದೇ;